**ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘ,ತುಮಕೂರು ಜಿಲ್ಲೆ (ರಿ.)**

**ದ್ವಿತೀಯ ಪಿ.ಯು.ಸಿ. ಪೂರ್ವ ಸಿದ್ಧತಾ ಪರೀಕ್ಷೆ-2023**

ವಿಷಯ ಸಂಕೇತ : 01 | ಒಟ್ಟು ಪ್ರಶ್ನೆಗಳು: 55

# ಕನ್ನಡ

ಸಮಯ : 3-15 ಗಂಟೆಗಳು | ಗರಿಷ್ಠ ಅಂಕಗಳು: 100

## ಅ-ವಿಭಾಗ

I ಅ) **ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** 10x1=10

1) ಸೀತೆಯನ್ನು ರಾವಣ ಎಲ್ಲಿರಿಸಿದ್ದನು?
ಅ)ಶಾಂತಿ ಜಿನಭವನ ಆ)ಪ್ರಮದವನ ಇ) ಉದ್ಯಾನವನ ಈ) ರಾಣಿಯ ಅಂತ:ಪುರ

2) ಯಾರನ್ನು ಯಮಲೋಕಕ್ಕೆ ಕಳಿಸಲು ದ್ರೌಪದಿ ಭೀಮನಿಗೆ ಹೇಳುತ್ತಾಳೆ?
ಅ)ಸೈಂಧವ ಆ)ಕೌರವ ಇ)ಕೀಚಕ ಈ) ಸುದೇಷ್ಣೆ

3) ಬಳಿತು ಕೆಮ್ಮುವ ಪ್ರಾಣಿ ಯಾರು?
ಅ) ತಾಯಿ ಆ)ತಂದೆ ಇ)ಮಗ ಈ)ವಿದ್ಯೆ ಕಲಿಸಿದ ಗುರು

4) ಶಿಲುಬೆಯೇರಿದವರು ಯಾರು?
ಅ)ಕೊಲೆಗಡುಕ ಬರಬ್ಬರು ಆ)ಜೀಸಸ್ ಇ)ಸ್ಪರ್ಟಿನ ಹುಡುಗಿ ಈ) ರೋಮ್‌ನ ಯಾಜಕರು

5) ಅಸ್ತಿತ್ವದ ಪ್ರಶ್ನೆ ಬಂದಾಗ ಲೇಖಿಕಿಗೆ ಯಾರು ನೆನಪಾಗುತ್ತಾರೆ?
ಅ)ಕಮಲ ಮೇಡಂ ಆ)ಸೀತಾ ಇ)ಮುದ್ದೇಗೌಡರು ಈ)ಕೀರ್ತಿ

6) ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು?
ಅ)ಡಾ. ಸಿ.ಎನ್. ಆರ್.ರಾವ್. ಬ) ಪ್ರೊ. ಎಚ್. ಆರ್.ರಾಮಕೃಷ್ಣರಾವ್ ಸಿ)ಅಬ್ದುಲ್ ಕಲಾಂ ಡಿ)ಮಗು

7) ಯಾವ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು?
ಅ) ಭೋಜ ಪ್ರಬಂಧ ಆ)ವಿಕ್ರಮ ವಿಜಯ ಇ)ಶ್ರೀರಾಮಾಶ್ವಮೇಧ ಈ) ಮಹಾವೀರ ಚರಿತಂ

8) ಮರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು?
ಅ)ಪಿಡಬ್ಲ್ಯುಡಿ ಆ)ಟೆಲಿಫೋನ್ ಇ) ಕರೆಂಟ್ ಈ)ಫಾರೆಸ್ಟ್

9) ನಿರೂಪಕರಿಗೆ ಯಾವ ಕೆಲಸ ಖಾಯಮ್ಮಾಗಿತ್ತು?
ಅ)ಜಗದ್ಗುರುಗಳನ್ನು ಹೊರುವ ಆ) ಗೇರ್‌ಬಾಕ್ಸ್ ಬಿಚ್ಚಿ ರಿಪೇರಿ ಮಾಡುವ
ಇ)ತರ್ಲೆ ಕೇಸು ಜಾಡು ಹಿಡಿಯುವ ಈ) ಎಲ್ಲಾ ಡಿಪಾರ್ಟ್‌ಮೆಂಟ್‌ಗೆ ಬುದ್ಧಿ ಹೇಳುವ

10) ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?
ಅ)ಮರ್ಗಪ್ಪ ಆ)ತಿಪ್ಪಣ್ಣ ಇ)ಶಂಕ್ರಪ್ಪ ಈ)ರಮೇಶಬಾಬು

ಆ) 11) **ಹೊಂದಿಸಿ ಬರೆಯಿರಿ.**

| | |
|---|---|
| ಅ) ಭಕ್ತಿ ಭಂಡಾರಿ ಬಸವಣ್ಣ | 1) ಜನಪದ ತ್ರಿಪದಿ |
| ಆ) ಹಬ್ಬಲಿ ಅವರ ರಸಬಳ್ಳಿ | 2) ಗುಟ್ಟೆ ಮಲ್ಲಪ್ಪ |
| ಇ) ದ.ರಾ. ಬೇಂದ್ರೆ | 3)ಕೂಡಲ ಸಂಗಮದೇವಾ |
| ಈ ಮುದುಕಿಯು ಹರಕೆ ಹೊತ್ತ ದೇವರು | 4) ಸುಕನ್ಯಾ ಮಾರುತಿ |
| ಉ) ಒಮ್ಮೆ ನಗುತ್ತೇವೆ | 5)ಕೀರ್ತನೆ |
| | 6) ಅಂಬಿಕಾತನಯದತ್ತ |

ಇ) **ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. (ಪೂಣಚ್ಚ ,ಮಾನಸಿಕ, ಚಿನ್ನಮ್ಮ ವೃದ್ಧ , ಡಾ.ಸಿ.ಎನ್. ಆರ್.ರಾವ್)** 5x1=5

12) ಕ) ಬಸಲಿಂಗನ ಶಾಯಿಲೆ ದೇಹದ ಮಟ್ಟದಿಂದ............ ಸ್ತರವನ್ನು ತಲುಪತೊಡಗಿತ್ತು.

ಚ) ಮಾರ್ಷನ ಜೊತೆಗಾರನ ಹೆಸರು...................

ಟ) ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು..........

ತ) ಬೆಳ್ಳಿ ಲೋಟ ಲಪಟಾಯಿಸಿದ ಅಪವಾದವನ್ನು ................... ಕುಟುಂಬದ ಮೇಲೆ ಹೊರಿಸಲಾಯಿತು.

ಪ) ಬಾಯಿ ಚಪಲ........... ರಿಗೆ ಜಾಸ್ತಿ ಇರುತ್ತದೆ.

## ಆ-ವಿಭಾಗ

II ಅ) **ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** 4x2=8

13) ರಾವಣನು ಅಂತಿಮವಾಗಿ ಯಾವ ನಿರ್ಧಾರಕ್ಕೆ ಬರುತ್ತಾನೆ?

14) ಹಡೆದವ್ವನನ್ನು ಯಾವಾಗ ನೆನೆಯಬೇಕು?

15) ಮಗು ಹುಟ್ಟಿ ಬೆಳೆದುದು ಎಲ್ಲಿ ?

16) ಸೊಸೆಗೆ ಹೊರಗಿನ ಕೆಲಸ ಬರಲೆಂದು ಮುದುಕಿ ಬಯಸಿದ್ದೇಕೆ?

17) ದನಗಳಿಗೆ , ಜನಗಳಿಗೆ ಏನೇನು ಇಲ್ಲ?

ಆ) **ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** 3x2=6

18) ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?

19) ಸಿಂಹಬಾಲದ ಕೋತಿಗಳಿಗೆ ಒದಗಿದ ತೊಂದರೆ ಏನು?

20) ಅರಮನೆಯಿಂದ ಎಂತಹ ಬಹುಮಾನ ಸಿಗಬಹುದೆಂದುಮುದ್ದಣ ಹೇಳಿದನು?

21) ಗಿಡ್ಡಮಾಸ್ತರು ಶಾಲೆಯಲ್ಲಿ ಹುಡುಗನಿಗೆ ಏಕೆ ಹೊಡೆಯುತ್ತಾರೆ?

ಇ) **ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** 4x2=8

22) ನಮ್ಮ ಕಡೆ ಕೆಮ್ಮು ಕಾಲಿಂಗ್ ಬೆಲ್ ಇದ್ದ ಹಾಗೆ ಎಂದು ನಿರೂಪಕರು ಹೇಳುವುದೇಕೆ?

23) ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?

24) ಜಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?

25) ಆನೆಯನ್ನು ಹದ್ದು ಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?
26) ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ-ವಿಭಾಗ

III ಅ) ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 2x3=6

27) ಹಗೆಗಳನು ಹಿಂಡಿದನು ಮನದೊಳಗೆ.
28) ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ.
29) ಬಲೆ ಬಿಸಿ ಬಂದ ಅಗೋ ಬೆಳಕು ಬೇಟೆಗಾರ.

ಆ) ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1x3=3

30) ಕನ್ನಡಿಗರು ಮೊದಲು ಕನ್ನಡದವರಾಗಬೇಕು.
31) ಪಾಪಕ್ಕೆ ಕಮ್ಮಿ ಮಾಡಿದರೆ ಸುಮ್ಮನೆ ಇರ್ತಿಯೇನೋ ನೀನು?

ಇ) ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 1x3=3

32) ನೀನ್ನ ಪುಕಾರೇನಿದ್ರೂ ಬರ್‍ವಣಿಗೇಲಿ ಇರಬೇಕು.
33) ಆನೇ ಬೇಲಿ ದಾಟಿ ಹೋಯ್ತು ಸಾರ್....

## ಈ-ವಿಭಾಗ

IV ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 2x4=8

34) ಗುರು ಲಘು ವರ್ತನದಲ್ಲಿ ವರ್ತಿಸಬಾರದೇಕೆ?
35) ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.
36) ವೀರ, ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು?
37) ಬತ್ತಿ, ಎಣ್ಣೆ, ಭಕ್ತ, ಯೋಗಿ, ಜೇಡ ...ಇವುಗಳ ಆತ್ಮ ಸಮರ್ಪಣೆಯ ಆಶಯವನ್ನು ಕವಿತೆ ಹೇಗೆ ಚಿತ್ರಿಸಿದೆ?

ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1x4=4

38) ಬಸಲಿಂಗ ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು?
39) ಕಮಲಾ ಮೇಡಂಗೆ ಮೂತ್ರಪಿಂಡದಲ್ಲಿ ಕಲ್ಲು ಮೂಡಿದ್ದೇಕೆ?
40) ತಾಯಿ -ತಂದೆ ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ ? ವಿವರಿಸಿ.

ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. 1x4=4

41) ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗಹಾಕಲು ಮಠದವರು ಹವಣಿಸಿದ್ದೇಕೆ?
42) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೆ? ವಿವರಿಸಿ.
43) ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣವೇನು?

## ಉ-ವಿಭಾಗ

V ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ. 1x5=5

44) ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ॥

ಅಥವಾ

ನೀವು ಬಡಿದ ಸುತ್ತಿಗೆಗಳು
ಮೊಳೆಗಳು
ಮಕುಟ ಹೆಣೆದ ಮುಳ್ಳುಗಳು
ಹಬ್ಬಿಸಿದ ಸುಳ್ಳುಗಳು
ರೋಮನರ ಕಿವಿಡೆಬ್ಬಿಸುವ ಕೊಂಬುಗಳು
ಕಾಲರಾಯನ ಗುಜರಿ ಸೇರಿಲ್ಲ
ವೇಷ ಮರೆಸಿವೆ ಅಷ್ಟೆ

## ಭಾಷಾಭ್ಯಾಸ

VI ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಆರಕ್ಕೆ ಆಯಾ ಸೂಚನೆಗೆ ಅನುಗುಣವಾಗಿ ಉತ್ತರ ಬರೆಯಿರಿ. 6x2=12

45) ಕೆಳಗಿನ ಎರಡು ಪದಗಳಿಗೆ ಅರ್ಥ ಬರೆಯಿರಿ . ಮಾನಿನಿ, ಕುನ್ನಿ, ಮಿದ್ದರಗೇಡಿ
46) ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ . ಲಘು, ಹದ್ದು, ದೊರೆ
47) ಕೆಳಗಿನ ಎರಡು ಪದಗಳಲ್ಲಿನ ಕಾಲಸೂಚಕಗಳನ್ನು ಗುರುತಿಸಿ. ನೋಡಿದಳು, ಕೇಳುತ್ತಾಳೆ, ಕಟ್ಟುವರು,
48) ಕೆಳಗಿನ ಎರಡು ಪದಗಳಲ್ಲಿನ ಧಾತುರೂಪ ಬರೆಯಿರಿ ಬಂದಳು, ಕಂಡನು, ಮಾಡುತ್ತಾನೆ
49) ಕೆಳಗಿನ ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬರೆಯಿರಿ. ಗಾಳಿಗೆತೂರು, ತಲೆಬಾಗು, ಹುಡುಗಾಟಿಕೆ
50) ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ. ಉರಿವಬತ್ತಿ, ಹಾಡುಹಕ್ಕಿಗಟ್ಟಿಪಾದ
51) ಕೆಳಗಿನ ಎರಡು ಪದಗಳಿಗೆ ನಿಷೇಧಾರ್ಥಕ ರೂಪ ಬರೆಯಿರಿ. ಬರುವರು, ತಿಂದಿತು, ಹಾಡುವೆ

ಆ) ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ. 1x5=5

52) ಪುಸ್ತಕಗಳ ಮಹತ್ವ 53)ಹೆಚ್ಚುತ್ತಿರುವ ವೃದ್ಧಾಶ್ರಮಗಳು

ಇ) ಪತ್ರಲೇಖನ: ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ . 1x4=4

54) ನಿಮ್ಮ ಕಾಲೇಜಿನಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭ ಕುರಿತು ನಿಮ್ಮ ತಂದೆಯವರಿಗೊಂದು ಪತ್ರ ಬರೆಯಿರಿ <u>ಅಥವಾ</u> ನಿಮ್ಮ ಊರಿನಲ್ಲಿ ಗ್ರಂಥಾಲಯವನ್ನು ಆರಂಭಿಸಲು ಕೋರಿ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

ಉ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ. 1x4=4

55) ಕೋತಿ ಊಂತರೆ, ಕುಡಿಕೆ ಹೊನ್ನು ಸಾಲದು <u>ಅಥವಾ</u> ಅಪಾಯ ಬಂದಾಗ ಉಪಾಯದಿಂದ ಗೆಲ್ಲಬೇಕು.